# All India Radio : Bangalore

## National Bulletin In Kannada

## 22.06.2017/ 19.35 hrs

ರಾಷ್ಟ್ರೀಯ ವಾರ್ತೆಗಳು

ಆಕಾಶವಾಣಿ : ಬೆಂಗಳೂರು

*****************

<u>ಮುಖ್ಯಾಂಶಗಳು</u>

1. ಮಾಜಿ ಲೋಕಸಭಾಧ್ಯಕ್ಷೆ ಮೀರಾಕುಮಾರ್ ರಾಷ್ಟ್ರಪತಿ ಹುದ್ದೆಗೆ, ವಿರೋಧ ಪಕ್ಷಗಳ ಅಭ್ಯರ್ಥಿ
2. ಸರಕು ಮತ್ತು ಸೇವಾ ತೆರಿಗೆ ಜಾರಿಗೆ ಸಹಕರಿಸುತ್ತಿರುವ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಇತರರಿಗೆ, ಕೇಂದ್ರ ಸಚಿವಸಂಪುಟದ ಅಭಿನಂದನೆ
3. ಬಾಂಬೆ ಷೇರುಮಾರುಕಟ್ಟೆಗೆ, ಪುಣೆ ಮುನ್ಸಿಪಲ್ ಕಾರ್ಪೋರೇಷನ್ ಬಾಂಡ್ ಸೇರ್ಪಡೆ- ನಗರ ಪ್ರದೇಶದ ಪುನಶ್ಚೇತನಕ್ಕೆ ಇದೊಂದು ಮಹತ್ವದ ಯೋಜನೆ ಎಂದು, ನಗರಾಭಿವೃದ್ಧಿ ಸಚಿವ ವೆಂಕಯ್ಯನಾಯ್ಡು ಬಣ್ಣನೆ
4. ಅಫ್ಘಾನಿಸ್ತಾನದ ಹೆಲ್ಮಂಡ್ ಪ್ರಾಂತ್ಯದ ರಾಜಧಾನಿ ಲಷ್ಕರ್ ಘಾ ದ ಬ್ಯಾಂಕ್‌ವೊಂದರ ಮೇಲೆ ಭಾರೀ ಕಾರ್ ಬಾಂಬ್ ದಾಳಿ- ಕನಿಷ್ಠ 29 ಸಾವು
5. ಆಸ್ಟ್ರೇಲಿಯನ್ ಓಪನ್‌ಸೂಪರ್‌ಸೀರಿಸ್ ಬ್ಯಾಡ್ಮಿಂಟನ್ ಪಂದ್ಯಾವಳಿ:ಪಿ. ವಿ. ಸಿಂಧು, ಸೈನಾ ನೆಹ್ವಾಲ್ , ಕಿಡಂಬಿ ಶ್ರೀಕಾಂತ್ ಮತ್ತು ಬಿ.ಸಾಯಿ ಪ್ರಣೀತ್ ಕ್ವಾರ್ಟರ್ ಫೈನಲ್ ಪ್ರವೇಶ.

*****************

ರಾಷ್ಟ್ರಪತಿ ಚುನಾವಣೆಯಲ್ಲಿ ಲೋಕಸಭಾ ಮಾಜಿ ಸ್ಪೀಕರ್ ಮೀರಾ ಕುಮಾರ್ ಅವರು ಪ್ರತಿಪಕ್ಷಗಳ ಅಭ್ಯರ್ಥಿಯಾಗಲಿದ್ದಾರೆ.

ದೆಹಲಿಯಲ್ಲಿಂದು ಸಂಜೆ ನಡೆದ ಪ್ರತಿಪಕ್ಷಗಳ ಸಭೆಯ ನಂತರ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ ಈ ಸಂಬಂಧ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

ಮಾಜಿ ಪ್ರಧಾನಿ ಡಾ. ಮನಮೋಹನ್‌ಸಿಂಗ್, ಸಿಪಿಐಎಂನ ಸೀತಾರಾಮ್ ಯಚೂರಿ, ಆರ್‌ಜೆಡಿ ಮುಖ್ಯಸ್ಥ ಲಾಲೂಪ್ರಸಾದ್, ಎನ್‌ಸಿಪಿಯ ಶರದ್‌ಪವಾರ್, ಸಮಾಜವಾದಿ ಪಕ್ಷದ ನಾಯಕ ರಾಮಗೋಪಾಲ್ ಯಾದವ್, ಬಿಎಸ್‌ಪಿ ನಾಯಕ ಸತೀಶ್ ಚಂದ್ರ ಮಿಶ್ರಾ, ಡಿಎಂಕೆಯ ಕನಿಮೊಳಿ ಸೇರಿದಂತೆ ಹಲವು ನಾಯಕರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮತ್ತೊಂದಡೆ ಎನ್‌ಡಿಎ ಅಭ್ಯರ್ಥಿ ರಾಮನಾಥ್ ಕೋವಿಂದ ನಾಳೆ ಬೆಳಿಗ್ಗೆ 11.30ಕ್ಕೆ ನಾಮಪತ್ರ ಸಲ್ಲಿಕೆಗೆ ವೇದಿಕೆ ಸಜ್ಜಾಗಿದೆ. ಬಿಜೆಪಿ ರಾಜ್ಯಗಳ ಮುಖ್ಯಮಂತ್ರಿಗಳು, ಎನ್‌ಡಿಎ ಹಿರಿಯ ನಾಯಕರು ಈ ಸಂದರ್ಭದಲ್ಲಿ ಉಪಸ್ಥಿತರಿರಲಿದ್ದಾರೆ.

ಕಾಂಗ್ರೆಸ್ ನಾಯಕ ಗುಲಾಮ್ ನಬೀ ಅಜಾದ್ ಮಾಧ್ಯಮಗಳೊಂದಿಗೆ ಮಾತನಾಡಿ ಎನ್‌ಡಿಎ ಅಭ್ಯರ್ಥಿ ರಾಮನಾಥ್ ಕೋವಿಂದ ವಿರುದ್ಧ ಮೀರಾ ಕುಮಾರ್ ಅವರನ್ನು ಕಣಕ್ಕಿಳಿಸಲು 17 ವಿರೋಧ ಪಕ್ಷಗಳು ಅವಿರೋಧವಾಗಿ ನಿರ್ಧರಿಸಿವೆ ಎಂದು ಹೇಳಿದ್ದಾರೆ.

ಮೀರಾಕುಮಾರ್ ಮಾಜಿ ವಿದೇಶಾಂಗ ಅಧಿಕಾರಿಯಾಗಿದ್ದು, ಹಿರಿಯ ಕಾಂಗ್ರೆಸ್ ನಾಯಕ ಬಾಬು ಜಗಜೀವನ್‌ರಾಮ್ ಅವರ ಪುತ್ರಿಯಾಗಿದ್ದಾರೆ.

*****************

ಸರಕುಗಳು ಮತ್ತು ಸೇವಾ ತೆರಿಗೆ ಜಿಎಸ್‌ಟಿ ಜಾರಿಗೊಳಿಸಲು ನೀಡಿರುವ ಸಹಕಾರಕ್ಕಾಗಿ ಕೇಂದ್ರ ಸಂಪುಟ, ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ಇತರರಿಗೆ ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಈ ಸಂಬಂಧ ನಿರ್ಣಯವೊಂದನ್ನು ಅಂಗೀಕರಿಸಿದೆ. ಸ್ವತಂತ್ರ ಭಾರತದಲ್ಲಿ ಜಿಎಸ್‌ಟಿ ಅತೀ ದೊಡ್ಡ ತೆರಿಗೆ ಸುಧಾರಣೆಯಾಗಿದ್ದು, ಜಗತ್ತಿನ ಯಾವುದೇ ದೇಶದ ಒಕ್ಕೂಟ ವ್ಯವಸ್ಥೆಯಲ್ಲಿ ವ್ಯಾಪಕ ಪ್ರಮಾಣದ ಪರೋಕ್ಷ ತೆರಿಗೆ ಸುಧಾರಣೆಯಾಗಿದೆ ಎಂದು ನಿರ್ಣಯದಲ್ಲಿ ತಿಳಿಸಲಾಗಿದೆ.

ಜಿಎಸ್‌ಟಿ ಅನುಷ್ಠಾನದಿಂದ ಜನಸಾಮಾನ್ಯರ ಮೇಲೆ ಒಟ್ಟಾರೆ ತೆರಿಗೆಯ ಭಾರ ತಗಲಿದ್ದು, ಉದ್ಯಮ ವಹಿವಾಟು ನಡೆಸಲು ಅನುಕೂಲವಾಗಲಿದೆ. ಒಟ್ಟಾರೆ ವ್ಯಾಪಕ ಬದಲಾವಣೆಗೆ ಆಸ್ಪದವಾಗಲಿದೆ ಎಂದು ತಿಳಿಸಿದೆ.

ರಾಷ್ಟ್ರೀಯ ಏಕತೆ ಹಾಗೂ ವಿತ್ತೀಯ ಒಕ್ಕೂಟ ವ್ಯವಸ್ಥೆಯಲ್ಲಿ ಹಂಚಿಕೆಗೆ ಜಿಎಸ್‌ಟಿ ಅತ್ಯುತ್ತಮ ಉದಾಹರಣೆಯಾಗಿದೆ. ಕೇಂದ್ರ ಸರ್ಕಾರ ಹಾಗೂ ಎಲ್ಲಾ ರಾಜ್ಯ ಸರ್ಕಾರಗಳು ಹಾಗೂ ಎಲ್ಲಾ ರಾಜಕೀಯ ಪಕ್ಷಗಳ ನಿಕಟ ಸಹಕಾರದಿಂದ ಜಿಎಸ್‌ಟಿ ಸಾಧ್ಯವಾಗಿದೆ ಎಂದು ನಿರ್ಣಯದಲ್ಲಿ ಹೇಳಲಾಗಿದೆ.

*****************

ಸಧ್ಯದಲ್ಲೇ ಅನುಷ್ಠಾನಗೊಳ್ಳಲಿರುವ ಸರಕುಗಳು ಮತ್ತು ಸೇವಾ ತೆರಿಗೆ –ಜಿಎಸ್‌ಟಿಯಿಂದ ದೇಶದಲ್ಲಿ ರಾಷ್ಟ್ರೀಯ ಮಾರುಕಟ್ಟೆ ಮಾತ್ರವಲ್ಲದೆ ತೆರಿಗೆ ನೆಲೆಯು ವಿಸ್ತರಣೆಗೊಳ್ಳಲಿದ್ದು, ದೀರ್ಘಾವಧಿಯಲ್ಲಿ ಒಟ್ಟಾರೆ ತೆರಿಗೆಗಳು ಇಳಿಕೆಯಾಗಲಿವೆ ಎಂದು ರಿಸರ್ವ್ ಬ್ಯಾಂಕ್ ಗವರ್ನರ್ ಊರ್ಜಿತ್ ಪಟೇಲ್ ಹೇಳಿದ್ದಾರೆ.

ಮುಂಬೈನಲ್ಲಿಂದು ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಿದ್ದ ಅವರು ಜಿಎಸ್‌ಟಿ ಡಿಜಿಟಲೀಕರಣ ಕ್ರಾಂತಿಯ ಒಂದು ಭಾಗವಾಗಿದ್ದು, ಸುಧಾರಣೆಗಳ ಜೊತೆಗೆ ತೆರಿಗೆಯ ನೆಲೆಯು ವಿಸ್ತಾರವಾಗಲಿದೆ ಎಂದು ತಿಳಿಸಿದ್ದಾರೆ.

*****************

ಅಬಕಾರಿ, ಸೇವಾ ತೆರಿಗೆ ಹಾಗೂ ವ್ಯಾಟ್ ಪಾವತಿದಾರರಿಗಾಗಿ ಸರಕು ಮತ್ತು ಸೇವಾ ತೆರಿಗೆಯ ನೋಂದಣಿಗಾಗಿ ಜೂನ್ 25ರಂದು ಹೊಸ ಗವಾಕ್ಷಿಯೊಂದನ್ನು ಪುನಾರಾರಂಭಿಸುವುದಾಗಿ ಸರ್ಕಾರ ಹೇಳಿದೆ.

ಕಂದಾಯ ಕಾರ್ಯದರ್ಶಿ ಹಸ್ಮುಖ್ ಅದಿಯಾ ಮಾಧ್ಯಮಗಳೊಂದಿಗೆ ಮಾತನಾಡಿ, ಜಿಎಸ್‌ಟಿಎನ್ ವೆಬ್‌ಸೈಟ್‌ನಲ್ಲಿ ವ್ಯಾಪಾರಿಗಳು, ಉದ್ದಿಮೆದಾರರು, ನೋಂದಾಯಿಸಿಕೊಳ್ಳಬಹುದು. ಈಗಾಗಲೇ ಎರಡು ಸುತ್ತಿನ ನೋಂದಣಿಗಳು ದಾಖಲಾಗಿವೆ. 80 ಲಕ್ಷ ತೆರಿಗೆದಾರರ ಪೈಕಿ ಶೇಕಡ 80 ರಷ್ಟು ಮಂದಿ ಜಿಎಸ್‌ಟಿ ಜಾಲಕ್ಕೆ ಈಗಾಗಲೇ ಸೇರ್ಪಡೆಗೊಂಡಿದ್ದಾರೆ. ಜುಲೈ 1 ರಿಂದ ಜಿಎಸ್‌ಟಿ ದೇಶಾದ್ಯಂತ ಅನುಷ್ಠಾನಗೊಳ್ಳಲಿದೆ ಎಂದು ತಿಳಿಸಿದ್ದಾರೆ.

*****************

ಮರಣದಂಡನೆ ಶಿಕ್ಷೆಗೆ ಗುರಿಯಾಗಿರುವವರಿಗೆ, ಗಲ್ಲುಶಿಕ್ಷೆಯಿಂದ ಪಾರಾಗಲು ಎಲ್ಲ ಕಾನೂನು ಮಾರ್ಗಗಳು ಅಂತ್ಯವಾದ ಬಳಿಕ ಅವರು, ಮತ್ತೊಮ್ಮೆ ಸುಪ್ರೀಂಕೋರ್ಟ್ ಮೊರೆ ಹೋಗುವ ಅವಕಾಶದ ಬಗ್ಗೆ, ಮೂವರು ನ್ಯಾಯಮೂರ್ತಿಗಳ ಪೀಠ ನಿರ್ಧರಿಸಲಿದೆ ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿದೆ.

ಮರಣದಂಡನೆಗೆ ಗುರಿಯಾಗಿರುವ ಬಾಬು ಆಲಿಯಾಸ್ ಕೇತನ್ ಹಾಗೂ ಮತ್ತೊಬ್ಬ, ತಮ್ಮ ಗಲ್ಲುಶಿಕ್ಷೆಗೆ ತಡೆ ನೀಡಬೇಕೆಂದು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಬೇಸಿಗೆ ರಜೆ ನಂತರ ಕೈಗೆತ್ತಿಕೊಳ್ಳಲು ನ್ಯಾಯಮೂರ್ತಿಗಳಾದ ಡಿ. ವೈ. ಚಂದ್ರಚೂಡ್ ಮತ್ತು ಎಸ್. ಕೆ. ಕೌಲ್ ಅವರಿದ್ದ ರಜಾ ಕಾಲದ ಪೀಠ ನಿರ್ಧರಿಸಿದೆ.

ಈ ಇಬ್ಬರು ಅಪರಾಧಿಗಳ ಕ್ಷಮದಾನ ಅರ್ಜಿಗಳನ್ನು ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಕಳೆದ ತಿಂಗಳ 25 ರಂದು ತಿರಸ್ಕರಿಸಿದ್ದು, ಯಾವುದೇ ಸಮಯದಲ್ಲಿ ಅವರನ್ನು ಗಲ್ಲಿಗೇರಿಸುವ ಸಂಭವವಿರುವುದರಿಂದ , ಅವರ ಅರ್ಜಿಗಳನ್ನು ತುರ್ತಾಗಿ ವಿಚಾರಣೆಗೆ ತೆಗೆದುಕೊಳ್ಳಬೇಕೆಂದು ಹಿರಿಯ ವಕೀಲ ಸಲ್ಮಾನ್ ಖುರ್ಷಿದ್ ನ್ಯಾಯಪೀಠದ ಮುಂದೆ ಮನವಿ ಮಾಡಿದರು.

ಮರಣದಂಡನೆಗೆ ಗುರಿಯಾದವರು ಇಂತಹ ಅರ್ಜಿಗಳನ್ನು ಸಲ್ಲಿಸಿದ ಕೂಡಲೇ, ಆ ಬಗ್ಗೆ ಕಾರಾಗೃಹ ಅಧಿಕಾರಿಗಳಿಗೆ ಮಾಹಿತಿ ನೀಡಲಾಗುವುದು, ಆದ್ದರಿಂದ ತಕ್ಷಣವೇ ಗಲ್ಲುಶಿಕ್ಷೆ ಜಾರಿ ಸಾಧ್ಯತೆ ಇಲ್ಲ ಎಂದು ನ್ಯಾಯಪೀಠ ತಿಳಿಸಿದೆ.

*****************

ಪ್ರಧಾನಿ ನರೇಂದ್ರ ಮೋದಿ ಅವರ ಮುಂಬರಲಿರುವ ಅಮೆರಿಕಾ ಭೇಟಿಯಿಂದ ಎರಡು ದೇಶಗಳ ನಡುವಣ ಆರ್ಥಿಕ ಬಾಂಧವ್ಯ ಮತ್ತಷ್ಟು ವೇಗ ಪಡೆದುಕೊಳ್ಳಲಿದೆ ಎಂದು ಭಾರತ ಹೇಳಿದೆ.

ದೆಹಲಿಯಲ್ಲಿಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಗೋಪಾಲ ಬಾಗ್ಲೆ ಮಾಧ್ಯಮದೊಂದಿಗೆ ಮಾತನಾಡಿ, ಪರಸ್ಪರ ಅನುಕೂಲವಾಗುವ ಆರ್ಥಿಕ ಮತ್ತು ವಾಣಿಜ್ಯ ಸಹಕಾರದ ಅಭಿವೃದ್ಧಿ ಪ್ರಧಾನಿ ಅವರ ಭೇಟಿ ಪ್ರಮುಖ ಕಾರ್ಯಸೂಚಿಯಾಗಿದೆ ಎಂದರು.

ಅಮೆರಿಕಾದಲ್ಲಿ ಭಾರತೀಯರ ಮೇಲೆ ನಡೆಯುತ್ತಿರುವ ಜನಾಂಗೀಯ ದಾಳಿ ಕುರಿತ ಪ್ರಶ್ನೆಗೆ ಉತ್ತರಿಸಿದ ವಕ್ತಾರರು ಎಲ್ಲಾ ದಾಳಿಗಳು ಜನಾಂಗೀಯ ದ್ವೇಷದ್ದಲ್ಲ ಎಂದು ಸ್ಪಷ್ಟಪಡಿಸಿದರು. ಭಾರತೀಯರ ಮೇಲೆ ದಾಳಿ ನಡೆದಾಗಲೆಲ್ಲ ಅಮೆರಿಕಾ ಸರ್ಕಾರ ಬಲವಾಗಿ ಖಂಡಿಸುತ್ತಿದೆ ಎಂದು ವಕ್ತಾರರು ತಿಳಿಸಿದರು.

*****************

ಭಾರತ ಮತ್ತು ಪಾಕಿಸ್ತಾನ ನಡುವಿನ ಎಲ್ಲ ದ್ವಿಪಕ್ಷೀಯ ವಿಷಯಗಳನ್ನು ದ್ವಿಪಕ್ಷೀಯವಾಗಿಯೇ ಪರಿಹರಿಸಿಕೊಳ್ಳಲಾಗುವುದು ಎಂದು ಭಾರತ ಹೇಳಿದೆ. ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಭಾರತ-ಪಾಕಿಸ್ತಾನ ಕುರಿತಂತೆ ನೀಡಿದ ಹೇಳಿಕೆಗೆ ಪ್ರತಿಕ್ರಿಯೆಸಿರುವ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಗೋಪಾಲ ಬಾಗ್ಲೆ ಭಾರತದ ಈ ನಿಲುವನ್ನು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗೆ ಈಗಾಗಲೇ ಮನನ ಮಾಡಿಕೊಡಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

*****************

ಜಮ್ಮು ಕಾಶ್ಮೀರದ ಕಾಕಾಪೋರಾ ಪ್ರದೇಶದಲ್ಲಿ ಇಂದು ಮುಂಜಾನೆ ಮೂವರು ಸ್ಥಳೀಯ ಲಷ್ಕರ್-ಇ-ತೋಯಬಾ ಉಗ್ರಗಾಮಿಗಳನ್ನು ಎನ್‌ಕೌಂಟರ್‌ನಲ್ಲಿ ಹತ್ಯೆ ನಡೆಸಿದ ಹಿನ್ನೆಲೆಯಲ್ಲಿ ದಕ್ಷಿಣ ಕಾಶ್ಮೀರದ ಪುಲ್ವಾಮ ಜಿಲ್ಲೆ ಮತ್ತು ಸುತ್ತಮುತ್ತಲ ಪಟ್ಟಣ ಹಾಗೂ ಪ್ರದೇಶಗಳಲ್ಲಿ ಸಾಮಾನ್ಯ ಜನ ಜೀವನ ಅಸ್ತವ್ಯಸ್ಥಗೊಂಡಿತು.

ಜಿಲ್ಲೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಬಿಗುವಿನ ವಾತಾವರಣ ಹಿನ್ನೆಲೆಯಲ್ಲಿ ಜನರು ಅಂಗಡಿ ಮುಂಗ್ಗಟ್ಟು ಮತ್ತಿತರ ಚಟುವಟಿಕೆಗಳನ್ನು ಸ್ವಯಂಪ್ರೇರಿತವಾಗಿ ಸ್ಥಗಿತಗೊಳಿಸಿದರು.

*****************

ಕೇಂದ್ರ ನಗರಾಭಿವೃದ್ಧಿ, ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಎಂ. ವೆಂಕಯ್ಯ ನಾಯ್ಡು, ಬಾಂಬೆ ಶೇರು ವಿನಿಮಯ ಕೇಂದ್ರದಲ್ಲಿಂದು ಜಾಗಟೆ ಭಾರಿಸುವ ಮೂಲಕ ಪುಣೆ ಮುನಿಸಿಪಲ್ ಬಾಂಡ್ ಪಟ್ಟಿ ಸೇರಿರುವುದನ್ನು ಸಾಂಕೇತಿಕವಾಗಿ ಪ್ರಕಟಿಸಿದರು.

1998 ರಲ್ಲಿ ಮೊದಲ ಬಾರಿಗೆ ಅಹಮದಾಬಾದ್ ಮುನಿಸಿಪಲ್ ಕಾರ್ಪೋರೇಷನ್ ಬಾಂಡ್ ಮಾರಾಟ ಮಾಡಿತ್ತು. 15 ವರ್ಷಗಳ ನಂತರ ಪುಣೆ ಪುರಸಭೆ ಬಾಂಡ್‌ಗಳನ್ನು ಮಾರಾಟಕ್ಕೆ ಇಂದು ಬಿಡುಗಡೆ ಮಾಡಿದೆ. ಭಾರತದ ಅತೀ ದೊಡ್ಡ ಮುನಿಸಿಪಲ್ ಬಾಂಡ್ ಕಾರ್ಯಕ್ರಮ ಇದಾಗಿದ್ದು, 2 ಸಾವಿರದ 264 ಕೋಟಿ ರೂಪಾಯಿ ಮೌಲ್ಯದ ಬಾಂಡ್‌ಗಳನ್ನು ಹೊಂದಿದೆ. ಇದರಲ್ಲಿ ಬರಲಿರುವ ಯಾವುದೇ ಲಾಭ ನೇರವಾಗಿ ಪುಣೆ ಮುನಿಸಿಪಲ್ ನಿಗಮಕ್ಕೆ ಸಂದಾಯವಾಗಲಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಕೇಂದ್ರ ಸಚಿವ ವೆಂಕಯ್ಯ ನಾಯ್ಡು, ಇಂದು ತಾವು ಭಾರಿಸಿದ ಸಾಂಕೇತಿಕ ಜಾಗಟೆ ಶಬ್ದದಿಂದ ದೇಶದ ನಗರಾಭಿವೃದ್ಧಿಗೆ ಸಂಪನ್ಮೂಲ ಸಂಗ್ರಹದಲ್ಲಿ ವ್ಯಾಪಕ ಪರಿಣಾಮಗಳು ಉಂಟಾಗಲಿದ್ದು, ದೇಶದ ನಗರ ನವೀಕರಣದಲ್ಲಿ ಈ ಶಬ್ದ ಪ್ರತಿಧ್ವನಿಸಲಿದೆ ಎಂದು ನುಡಿದರು. ನಗರ ಪ್ರದೇಶಗಳಲ್ಲಿ ವ್ಯಾಪಕ ಮೂಲ ಸೌಕರ್ಯ ಕೊರತೆಯಿದ್ದು, ಇದನ್ನು ನಿವಾರಿಸಲು ಭಾರಿ ಪ್ರಮಾಣದ ಸಂಪನ್ಮೂಲದ ಅಗತ್ಯವಿದೆ ಎಂದರು.

*****************

ಉತ್ತರಖಂಡ ರಾಜ್ಯ ದೇಶದ ನಾಲ್ಕನೇ ಬಯಲು ಬರ್ಹಿದಸೆ ಮುಕ್ತ ರಾಜ್ಯವಾಗಿದೆ. ಕೇಂದ್ರ ಸಚಿವ ನರೇಂದ್ರ ಸಿಂಗ್ ತೋಮರ್ ಡೆಹರಾಡೂನ್‌ನಲ್ಲಿಂದು ಒಎನ್‌ಜಿಸಿ ಆಯೋಜಿಸಿದ್ದ ಸ್ವಚ್ಛ ಭಾರತ ಯೋಜನೆ ಕಾರ್ಯಕ್ರಮದಲ್ಲಿ ಉತ್ತರಾಖಂಡ ಬಯಲು ಬರ್ಹಿದಸೆ ಮುಕ್ತ ರಾಜ್ಯ ಎಂದು ಘೋಷಿಸಿದರು.

*****************

ಅಫ್ಘಾನಿಸ್ತಾನದ ಹೆಲ್ಮೆಂಡ್ ಪ್ರಾಂತ್ಯದ ರಾಜಧಾನಿ ಲಷ್ಕರ್ ಘಾ ದಲ್ಲಿನ ಬ್ಯಾಂಕೊಂದರ ಬಳಿ ಶಕ್ತಿಶಾಲಿ ಕಾರ್ ಬಾಂಬ್ ಸ್ಪೋಟಿಸಿದ್ದರಿಂದ ಕನಿಷ್ಠ 29 ಮಂದಿ ಮೃತಪಟ್ಟಿದ್ದಾರೆ.

ಬ್ಯಾಂಕ್ ಬಳಿ ತಮ್ಮ ವೇತನ ಪಡೆದುಕೊಳ್ಳಲು ಜನರು ಸರತಿ ಸಾಲಿನಲ್ಲಿ ನಿಂತಿದ್ದಾಗ ಈ ಸ್ಪೋಟ ಸಂಭವಿಸಿದೆ. ಪವಿತ್ರ ರಂಜಾನ್ ಮಾಸದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಭೀಕರ ದಾಳಿ ಇದಾಗಿದೆ.

ದಾಳಿಯಲ್ಲಿ 60 ಮಂದಿ ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ಈ ದಾಳಿಯ ಹೊಣೆಯನ್ನು ಯಾವುದೇ ಸಂಘಟನೆ ಈವರೆಗೆ ಹೊತ್ತುಕೊಂಡಿಲ್ಲ ರಂಜಾನ್ ವೇಳೆ ಕದನ ವಿರಾಮ ಘೋಷಿಸುವಂತೆ ಸರ್ಕಾರ ಮನವಿ

ಮಾಡಿಕೊಂಡರೂ ತನ್ನ ಆಕ್ರಮಣಕಾರಿ ದಾಳಿ ಮುಂದುವರೆಸಿರುವ ತಾಲಿಬಾನ್ ಉಗ್ರರ ಕೈವಾಡ ಇರಬಹುದು ಎಂದು ಶಂಕಿಸಲಾಗಿದೆ.

ದಾಳಿಯಲ್ಲಿ ನಾಗರಿಕರು ಹಾಗೂ ಪೊಲೀಸರಿಗೂ ಸಾವು ನೋವು ಸಂಭವಿಸಿದ್ದು, ಸಾವಿನ ಸಂಖ್ಯೆ ಮತ್ತಷ್ಟು ಏರಿಕೆಯಾಗುವ ಭೀತಿ ಇದೆ ಎಂದು ಸರ್ಕಾರಿ ಆಸ್ಪತ್ರೆಯ ಮೂಲಗಳು ಹೇಳಿವೆ.

******************

ಸಿಡ್ನಿಯಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯನ್ ಸೂಪರ್ ಸೀರಿಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪಿ.ವಿ. ಸಿಂಧು, ಸೈನಾ ನೆಹವಾಲ್, ಕಡಂಬಿ ಶ್ರೀಕಾಂತ್ ಹಾಗೂ ಬಿ. ಸಾಯಿ ಪ್ರಣೀತ್ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರೆ, ಮಹಿಳೆಯರ ಸಿಂಗಲ್ಸ್‌ನಲ್ಲಿ ಐದನೇ ಶ್ರೇಯಾಂಕಿತ ಒಲಿಂಪಿಕ್ ರಜತ ಪದಕ ವಿಜೇತೆ ಸಿಂಧು ಚೈನಾದ ಚೆನ್ ಕ್ಸಿಯೋಸಿನ್ ಅವರನ್ನು 21-13, 21-18 ಮಣಿಸಿ, ಕ್ವಾರ್ಟರ್ ಫೈನಲ್ ತಲುಪಿದರು.

ಮತ್ತೊಂದು ಮಹಿಳೆಯರ ಸಿಂಗಲ್ಸ್‌ನಲ್ಲಿ ಹಿರಿಯ ಶೆಟ್ಲರ್ ಸೈನಾ ನೆಹವಾಲ್, ಮಲೇಶೀಯಾದ ಸೋನಿಯಾ ಚೇ ಅವರನ್ನು 21-15, 20-22, 22-14, ಮಣಿಸಿ, ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಪುರುಷರ ಸಿಂಗಲ್ಸ್‌ನ ಎರಡನೇ ಸುತ್ತಿನಲ್ಲಿ ಕಡಂಬಿ ಶ್ರೀನಾಥ್ ಹಾಗೂ ಬಿ ಸಾಯಿ ಪ್ರಣಿತ್ ಜಯ ಸಾಧಿಸಿ, ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ.

******* END *******